ಕೆಲಸ ಸರ್ಕಾರದಿಂದ ಆದರೆ ನಾವು ಸದನದಲ್ಲಿ ಕುಳಿತು ಹೇಗೆ ಕೆಲಸ ಮಾಡುವುದು?

ಅಧ್ಯಕ್ಷರು: ಮಾನ್ಯ ಸಣ್ಣ ನೀರಾವರಿ ಮಂತ್ರಿಯವರೇ, ತಾವು ಶನಿವಾರದೊಳಗೆ ಸದಸ್ಯರಿಗೆ ಉತ್ತರವನ್ನು ಕೊಡಿ.

ಶ್ರೀ ಸಿ.ಬೈರೇಗೌಡ: ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಗೆ ನಾಳೆ ಉತ್ತರವನ್ನು ಕೊಡಿಸಿ.

ಶ್ರೀ ಕುಮಾರ್ ಬಂಗಾರಪ್ಪ: ಮಾನ್ಯ ಅಧ್ಯಕ್ಷರೇ, ರಾಂಪುರ ಏತ ನೀರಾವರಿ ಕಾಮಗಾರಿಯ ವಿಚಾರವನ್ನು ಭಾರಿ ಮತ್ತು ಮಧ್ಯಮ ನೀರಾವರಿ ಇಲಾಖೆಗೆ ಕಳುಹಿಸಿಕೊಡಲಾಗಿದೆ.

ಶ್ರೀ ಸಿ.ಬೈರೇಗೌಡ: ಮಾನ್ಯ ಭಾರೀ ನೀರಾವರಿ ಸಚಿವರು ಇದ್ದಾರೆ. ಉತ್ತರ ಕೊಡಿಸಿ.

ಅಧ್ಯಕ್ಷರು: ಸಚಿವರು ಇದ್ದಾರೆ. ಅವರಿಗೆ ಪ್ರಶ್ನೆ ಹೋಗಿದೆ. ಅವರು ಇದ್ದರೂ ಅವರು ಉತ್ತರ ಕೊಡಬೇಕಲ್ಲ.

ಶ್ರೀ ಅಮರೇಗೌಡ ನಿಂಗನಗೌಡ ಬಯ್ಯಾಪುರ್: ಹಿರಿಯ ಸಚಿವರು ಇದ್ದಾರೆ. ನಾಳೆ ಆದರೂ ಉತ್ತರ ತರಿಸಿಕೊಡಬಹುದು.

ಅಧ್ಯಕ್ಷರು: ಅವರೇನು ಹೇಳುತ್ತಾರೆ. ಟ್ರಾನ್ಸ್‌ಫರ್ ಆಗಿದ್ದ ಎಂದು ಹೇಳುತ್ತಾರೆ.

ಶ್ರೀ ಎಚ್.ಕೆ.ಪಾಟೀಲ್: ನಾನು ಉತ್ತರ ತರಿಸಿಕೊಡಬೇಕು.

ಶ್ರೀ ಸಿ.ಬೈರೇಗೌಡ: ಈ ಅಧಿವೇಶನದಲ್ಲಿಯೇ ತರಿಸಬೇಕು.

ಅಧ್ಯಕ್ಷರು: ಹೇಳಿದ್ದೀನಲ್ಲಾ ಸಾಧ್ಯವಾದಷ್ಟು ಒಳಗೆ ತರಿಸಿ ಎಂದು ಹೇಳಿದ್ದೇನೆ.

ಔರಾದ್ ತಾಲ್ಲೂಕಿನಲ್ಲಿ 110 ಹಾಗೂ 33 ಕೆ.ವಿ. ಸ್ಟೇಷನ್ ಸ್ಥಾಪನೆ.

333(3761)

ಶ್ರೀ ಗುಂಡಪ್ಪ ವಕೀಲ್(ಔರಾದ್): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಔರಾದ್ ತಾಲ್ಲೂಕಿನಲ್ಲಿ ಲೋ ವೋಲ್ಟೇಜ್‌ನಿಂದ ಪವರ್ ಸಪ್ಲೈ

ಸಮರ್ಪಕವಾಗಿ ಆಗದೆ ಇರುವುದು ನಿಜವಲ್ಲವೇ?

ಆ. ಹಾಗಿದ್ದಲ್ಲಿ ಸಂತಾಪೂರ ಗ್ರಾಮದಲ್ಲಿ 110 ಕೆ.ವಿ.ಸ್ಟೇಷನ್ ಹಾಗೂ ಖೆರಡಾ ಗ್ರಾಮದಲ್ಲಿ 33 ಕೆ.ವಿ. ಸ್ಟೇಷನ್ ಸ್ಥಾಪನೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಇ. ಹಾಗಿದ್ದಲ್ಲಿ, ಈ ವರ್ಷ ಸದರಿ ಯೋಜನೆ ಕೈಗೆತ್ತಿಕೊಂಡು ಹಣ ಪೂರೈಸಲಾಗುತ್ತದೆಯೇ?

ಶ್ರೀ ವೀರಕುಮಾರ್ ಅ.ಪಾಟೀಲ್ (ಇಂಧನ ರಾಜ್ಯ ಸಚಿವರು):

ಅ. ಹೌದು.

ಆ. ಹೌದು.

ಇ. ಪ್ರಸ್ತಾವನೆಗಳು ಇನ್ನೂ ಪ್ರಾಥಮಿಕ ಹಂತದಲ್ಲಿರುವುದರಿಂದ ಮುಂದಿನ ವರ್ಷದಲ್ಲಿ ತೆಗೆದುಕೊಳ್ಳಲು ಪರಿಗಣಿಸಲಾಗುವುದು.

ಶ್ರೀ ಗುಂಡಪ್ಪ ವಕೀಲ್: ಮಾನ್ಯ ಅಧ್ಯಕ್ಷರೆ, ಇಲ್ಲಿ ಉತ್ತರ ಕೊಟ್ಟಿರುವುದು ಸಮಂಜಸವಾಗಿಲ್ಲ. 10 ವರ್ಷಗಳಿಂದ ಯಾವುದಾದರೂ ಪ್ರಸ್ತಾವನೆ ಪ್ರಾರಂಭಿಕ ಹಂತದಲ್ಲಿ ಇರುತ್ತದಾ? ಪ್ರಸ್ತಾವನೆಗಳು ಇನ್ನೂ ಪ್ರಾರಂಭಿಕ ಹಂತದಲ್ಲಿವೆ ಎಂದು ಉತ್ತರ ಕೊಟ್ಟಿದ್ದಾರೆ. ನಮಗೆ ಬೇಕಾಗಿರುವುದು 110 ಕೆವಿ ಸ್ಟೇಷನ್. ಬಿರಾದ್ ಕ್ಷೇತ್ರಕ್ಕೆ ವಿದ್ಯುತ್ ಸರಬರಾಜು ಆಗುತ್ತಿಲ್ಲ. ಸ್ಮಾಲ್ ಯೂನಿಟ್ಸ್ ಎಲ್ಲಾ ಶಟ್-ಡೌನ್ ಆಗುತ್ತಿವೆ. ಸುಟ್ಟು ಹೋಗುತ್ತಿದ್ದಾವೆ. ಈಗ ಭಾಲ್ಕಿ ತಾಲ್ಲೂಕಿನಿಂದ 110 ಕೆವಿ ಸ್ಟೇಷನ್‌ನಿಂದ ನಮಗೆ ಸರಬರಾಜು ಆಗಬೇಕು, ಅದು ಆಗುತ್ತಿಲ್ಲ. ವೋಲ್ಟೇಜ್ ಕಡಿಮೆ ಬರುತ್ತಿದೆ. ಅದರ ಸಲುವಾಗಿ ಸುಮಾರು 10 ವರ್ಷಗಳಿಂದ ಫೈಟ್ ಮಾಡುತ್ತಿದ್ದೇವೆ. 110 ಕೆವಿ ಸ್ಟೇಷನ್ ಬಿರಾದ್ ಕ್ಷೇತ್ರದಲ್ಲಿ ಸ್ಥಾಪನೆ ಮಾಡಿಕೊಡಿ ಎಂದು ಹೋರಾಟ ಮಾಡುತ್ತಿದ್ದೇವೆ. ಉತ್ತರ ಕೊಡುತ್ತೀರಾ? ಆ ಪ್ರಸ್ತಾವನೆಗಳು ಇನ್ನೂ ಪ್ರಾರಂಭಿಕ ಹಂತದಲ್ಲಿದ್ದಾವೆ ಎಂದು ಉತ್ತರ ಕೊಡುತ್ತೀರಿ. ಹತ್ತು ವರ್ಷಗಳಿಂದ ಪ್ರಸ್ತಾವನೆಗಳು ಪ್ರಾರಂಭಿಕ ಹಂತದಲ್ಲಿರಲು ಸಾಧ್ಯನಾ? ಅದಕ್ಕಾಗಿ ಈ 110 ಕೆವಿ ಸ್ಟೇಷನ್ ಸ್ಥಾಪನೆ ಮಾಡಲಿಕ್ಕೆ ಯಾವ ಕ್ರಮ ತೆಗೆದುಕೊಳ್ಳುತ್ತೀರೋ, ಆಮೇಲೆ ಯಾವಾಗ ಮಾಡಿಕೊಡುತ್ತೀರಿ? ಏನಾದರೂ ಮಾಡುವ ಇಚ್ಛೆ ಇದೆಯೋ ಇಲ್ಲವೋ? ಮಾಡುವ ಇಚ್ಛೆ ಇಲ್ಲದಿದ್ದರೆ ಮಾಡುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿ ಬಿಡಿ. ಪ್ರಾರಂಭದ ಹಂತ ಎಂದರೆ ಯಾವ ಹಂತ? ಇದು ನಗುವ ಪ್ರಶ್ನೆ ಅಲ್ಲ ಸೀರಿಯಸ್ ವಿಚಾರ ಇದು. ಹತ್ತು ವರ್ಷದಿಂದ ಇದೇ ಉತ್ತರ ಕೊಡುತ್ತಿದ್ದಾರೆ, ಪ್ರಾರಂಭದ ಹಂತ

ಎಂದು. ಇದು ನಗುವ ಮಾತಲ್ಲ. ಅದಕ್ಕೆ ನಾನು ಹೇಳಿದ್ದು ಸಂಬಂಧಪಟ್ಟ ಮಂತ್ರಿಗಳು ಇದಕ್ಕೆ ಉತ್ತರ ಕೊಡಬೇಕು.

ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)(ಇಂಧನ ಸಚಿವರ ಪರವಾಗಿ): ವಕೀಲರು ಪ್ರಶ್ನೆ ಕೇಳಿದ್ದಾರೆ. ವಕೀಲರೇ ಉತ್ತರ ಕೊಡುವುದು ಒಳ್ಳೆಯದು ಎಂದು ನಾನು ನಿಂತೆ. ಬೇಡ ಎಂದರೆ ಅವರನ್ನೇ ಕಳಿಸುತ್ತೇನೆ. ಈಗ ಅವರು ಕೇಳಿರತಕ್ಕದ್ದು ಜಿರಾದ್ ತಾಲ್ಲೂಕಿನಲ್ಲಿ ವೋಲ್ಟೇಜ್ ಫ್ಲಕ್ಚುಯೇಷನ್ ಇದೆ, ಕಡಿಮೆ ಇದೆ ಎನ್ನತಕ್ಕ ಮಾತು ನಿಜ. ಅದನ್ನು ನಾವು ಒಪ್ಪಿಕೊಂಡಿದ್ದೇವೆ. 110 ಕೆವಿ ಲೈನ್ ಪೂರ್ಣ ಆಗುವುದಕ್ಕೆ ತಡ ಆಗುತ್ತದೆ ಎನ್ನುವ ಕಾರಣಕ್ಕಾಗಿ ಈಗ 33 ಕೆವಿ ಡಬಲ್ ಸೆಟ್ ಔಟ್ ಲೈನನ್ನು ಹಾಕುವುದಕ್ಕೆ ಸರ್ಕಾರ ತೀರ್ಮಾನ ತೆಗೆದುಕೊಂಡು ಅದಕ್ಕೆ ಬೇಕಾದಂತಹ ಎಲ್ಲಾ ಮೂಲ ಸೌಕರ್ಯಗಳನ್ನು ಒದಗಿಸಿ ಕೊಟ್ಟಿದೆ. ಈ ವರ್ಕ್ 10 ಮೆಗಾವ್ಯಾಟ್ 110:33 ಕೆವಿ ಪವರ್ ಟ್ರಾನ್ಸ್‌ಫಾರ್ಮೇಷನ್, 20 ಮೆಗಾವ್ಯಾಟ್ 110:33ಕೆವಿಗೆ ಪರಿವರ್ತನೆ ಮಾಡುವುದಕ್ಕೆ ಭಾಲ್ಕಿ ಸ್ಟೇಷನ್‌ನಿಂದ 139 ಲಕ್ಷ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ಮಾಡಲು ಈಗಾಗಲೇ ಪ್ರೋಗ್ರೆಸ್‌ನಲ್ಲಿದೆ. ಆದ್ದರಿಂದ ಈ ಎರಡು ಕಾರಣಗಳಿಂದಾಗಿ ಸ್ವಲ್ಪ ಇಂಪ್ರೂವ್ ಆಗಬಹುದು ನಿಮ್ಮ ಪವರ್ ಸಿಚುಯೇಷನ್.

ಶ್ರೀ ಸಿ.ಭೈರೇಗೌಡ: ಟ್ರಾನ್ಸ್‌ಫಾರ್ಮೇಷನ್ ಲಾಸಸ್ ಜಾಸ್ತಿ ಆಗುತ್ತಿರುವುದು ಇದೇ ಕಾರಣದಿಂದ. ಟ್ರಾನ್ಸ್‌ಫಾರ್ಮೇಷನ್ ಮೇಂಟಿನೆನ್ಸ್ ಮತ್ತು ಡಿಸ್ಟ್ರಿಬ್ಯೂಷನ್ ಸರಿಯಾಗಿ ಇಲ್ಲದೇ ಇದ್ದರೆ ಲಾಸ್ ಆಗುತ್ತದೆ. 18.50 ಇದ್ದದ್ದು ಈಗ 36ಕ್ಕೆ ಏರುತ್ತಿರತಕ್ಕದ್ದು ಇದೇ ಕಾರಣದಿಂದ. ಆದ್ದರಿಂದ ಇಲಾಖೆಯವರನ್ನು ಕರೆದು ಚರ್ಚೆ ಮಾಡಿ.

ಶ್ರೀ ಡಿ.ಬಿ.ಚಂದ್ರೇಗೌಡ: ನಾವು ಸಾಕಷ್ಟು ಚರ್ಚೆ ಮಾಡಿದ್ದೇವೆ. ಲಾಂಗ್ ಟರ್ಮ್ ಮೆಷರ್ ಏಚಾರದಲ್ಲಿ ನೀವು ಹೇಳಿದ್ದು ಸರಿ. ಈಗ ಒಂದು ಶಾರ್ಟ್ ಟರ್ಮ್ ಮೆಷರ್ ಏನು ಅಂದರೆ 10ನ್ನು 20 ಮಾಡುವುದು. 33ಕೆವಿ:110ಗೆ ಒಂದು ಹೊಸ ಲೈನ್ ಬರುವವರೆಗೆ ಕೆಲವು ಸುಧಾರಣೆಗಳನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇದಕ್ಕೆ ಖರ್ಚಾಗುತ್ತದೆ ಏನು ಮಾಡುವುದು?

ಶ್ರೀ ಬಿ.ಸೋಮಶೇಖರ್: ಮಾನ್ಯ ಅಧ್ಯಕ್ಷರೆ, ನಾನು ಗೃಹ ಇಲಾಖೆಗೆ ಸಂಬಂಧಪಟ್ಟಂತೆ ಒಂದು ಸರಳವಾದ ಪ್ರಶ್ನೆ ಕೇಳಿದ್ದೆ. ಸ್ಟೇಟಸ್ ಇರತಕ್ಕದ್ದು 17.7.2001ನೇ ಇಸವಿಗೆ ಬರಬೇಕಾಗಿರತಕ್ಕದ್ದು. ಅದು ಅನ್‌ಸ್ಟಾರ್ಡ್ ಆಗಿರತಕ್ಕಂತಹದು. 17ನೇ ತಾರೀಖು ಬಂದಿಲ್ಲ. ಇವತ್ತು ಗೃಹ ಸಚಿವರ ಪ್ರಶ್ನಾವಳಿ ದಿನ. ಇವತ್ತೂ ಬಂದಿಲ್ಲ. ಯಾವತ್ತು ಬರುತ್ತದೆ?

ಶ್ರೀ ಗುಂಡಪ್ಪ ವಕೀಲ್: ನಾನು ಕೇಳುವುದು ಟೆಕ್ನಿಕಲ್ ಸ್ಯಾಂಕ್ಷನ್ ಸಲುವಾಗಿ ಇದೆಯೋ ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷನ್ ಸಲುವಾಗಿ ಇದೆಯೋ ಅಥವಾ ಫೈನಾನ್ಷಿಯಲ್ ಪ್ರಾಪಷನ್ಸ್ ಏನಾದರೂ ಮಾಡುತ್ತಿದ್ದೀರೋ? ಯಾವ ಹಂತದಲ್ಲಿ ಈ ಪ್ರಾಜೆಕ್ಟ್ ಇದೆ? ಯಾವಾಗ ಮಾಡುತ್ತೀರಿ? ಏನಾದರೂ ಮಾಡುವ ಇಚ್ಛೆ ಇದೆಯೇ? ಯಾವ ಹಂತದಲ್ಲಿದೆ? ಯಾವಾಗ ಮಾಡುತ್ತೀರಿ? ಏನು ಮಾಡುತ್ತೀರಿ? ಅದರ ಬಗ್ಗೆ ಸ್ವಲ್ಪ ವಿವರವಾದ ಮಾಹಿತಿ ಕೊಡಿ.

ಶ್ರೀ ಟಿ.ಬಿ.ಚಂದ್ರಗೌಡ: ಈಗಾಗಲೇ ತಾಂತ್ರಿಕ ಮಂಜೂರಾತಿಯನ್ನು 27.12.2000ಕ್ಕೆ ಕೊಟ್ಟಾಗಿದೆ. ಅದಕ್ಕೋಸ್ಕರವಾಗಿ ಟೋಕನ್ ಪ್ರಾಪಷನ್ ಐದು ಲಕ್ಷ ರೂಪಾಯಿ ಇಟ್ಟು ಬಿಟ್ಟಿದ್ದಾರೆ. ಆದ್ದರಿಂದ ಈ ಪ್ರಾಜೆಕ್ಟ್ ಪೂರ್ಣವಾಗುವುದರಲ್ಲಿ ನಿಮಗೆ ಯಾವ ಶಂಕೆಯೂ ಬೇಡ. ನಿಧಾನ ಆಗುತ್ತದೆ ಎನ್ನುವ ಕಾರಣಕ್ಕಾಗಿ ಅಲ್ಲಿ ಕೆಲವು ಸುಧಾರಣೆಗಳನ್ನು ತಂದಿದ್ದೇವೆ ಎನ್ನುವ ಮಾತನ್ನು ಹೇಳಿದ್ದೇನೆ. ಜೊತೆಗೆ ನಿಮ್ಮ ಸಂತಪುರ 110 ಕೆವಿ ಲೈನ್ ಆಗದೇ ನೀವು ಈಗ ಕೇಳುವ ಪ್ರಶ್ನೆ 33 ಲೈನ್ ಸ್ಟ್ರೆಂಗ್ತನ್ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಈ 110 ಕೆವಿ ಕಂಪ್ಲೀಟ್ ಆದ ತಕ್ಷಣ ಅದನ್ನೂ ಜೊತೆಗೆ ತಗದುಕೊಳ್ಳುತ್ತೇವೆ ಎನ್ನುವಂತಹ ಮಾತನ್ನು ಹೇಳಿದ್ದೇನೆ.